## 5

# ಪರಿಶುದ್ಧಾತ್ಮನು ಯಾರು?

"ಪರಿಶುದ್ಧಾತ್ಮವು *ಏನಾಗಿದೆ?*" ಎಂಬುದು ಪ್ರಶ್ನೆಯಲ್ಲ. ಆದರೆ "ಪರಿಶುದ್ಧಾತ್ಮನು *ಯಾರಾಗಿದ್ದಾನೆ?*" ಎಂಬುದು ಪ್ರಶ್ನೆ. ಪರಿಶುದ್ಧಾತ್ಮನು ಒಬ್ಬ ಜೀವಿಯೂ, ವ್ಯಕ್ತಿತ್ವವುಳ್ಳ ವ್ಯಕ್ತಿಯೂ, ದೈವತ್ವದಲ್ಲಿ ಮೂರನೆಯ ಸದಸ್ಯನೂ, ಆಗಿರುವದರಿಂದ ಈ ಪ್ರಶ್ನೆ. ಆತನು ಒಂದು ಶಕ್ತಿಗಿಂತಲೂ ಇಲ್ಲವೇ ಬಲಕ್ಕಿಂತಲೂ ಹೆಚ್ಚಿನವನಾಗಿದ್ದಾನೆ; ಆತನು ಜೀವಿಸುವ ಪರಲೋಕದ ವ್ಯಕ್ತಿಯಾಗಿದ್ದಾನೆ.

## ಆತನು ಒಬ್ಬ ವ್ಯಕ್ತಿಯಂತೆ ಇದ್ದಾನೆ

ಬೈಬಲಿನಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಯು ಪರಿಶುದ್ಧಾತ್ಮನು ಒಬ್ಬ ದೈವಿಕ ವ್ಯಕ್ತಿಯಾಗಿದ್ದಾನೆಂಬ ಸಂಗತಿಯನ್ನು ತೋರಿಸುತ್ತದೆ. ತಂದೆ ಹಾಗೂ ಕುಮಾರನಿಗೆ ಇರುವ ವೈಯಕ್ತಿಕ ವಿಶೇಷ ಗುಣಗಳೇ ಆತನಿಗೂ ಇರುತ್ತವೆ.

### ಆತನಿಗೆ ಒಬ್ಬ ವ್ಯಕ್ತಿಯ ಗುಣಲಕ್ಷಣಗಳಿವೆ

ಪರಿಶುದ್ಧಾತ್ಮನ ಗುಣಲಕ್ಷಣಗಳು ಆತನು ಒಂದು ಶಕ್ತಿಯಾಗಿರುವದರ ಬದಲು ಜೀವಿಸುವ ವ್ಯಕ್ತಿಯಾಗಿದ್ದಾನೆ, ವೈಯಕ್ತಿಕ ವ್ಯಕ್ತಿಯಾಗಿದ್ದಾನೆ ಎಂಬುದನ್ನು ಸೂಚಿಸುತ್ತವೆ:

1. *ಆತನಲ್ಲಿ ತೀರ್ಪು ಇದೆ*: "ಪರಿಶುದ್ಧಾತ್ಮನಿಗೂ ನಮಗೂ ಒಳ್ಳೆಯದೆಂದು ತೋಚಿತು" (ಅಪೊಸ್ತಲರ ಕೃತ್ಯಗಳು 15:28ಎ).

2. *ಆತನಿಗೆ ಮನಸ್ಸಿದೆ*: "ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮನ ಮನೋಭಾವವು ಏನೆಂದು ತಿಳಿದದೆ" (ರೋಮಾಪುರ 8:27ಎ).

3. *ಆತನು ಉದ್ದೇಶಿಸುತ್ತಾನೆ*: "ಈ ವರಗಳನ್ನೆಲ್ಲಾ ಒಬ್ಬನೇ ಆತ್ಮನು ತಾನು ಉದ್ದೇಶಿಸಿದಂತೆ ಪ್ರತಿಯೊಬ್ಬನಿಗೆ ಪ್ರತ್ಯೇಕವಾಗಿ ಹಂಚಿಕೊಡುತ್ತಾನೆ"

(1 ಕೊರಿಂಥ 12:11).

4. *ಆತನಿಗೆ ಅರಿವು ಉಂಟು*: "ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ" (1 ಕೊರಿಂಥ 2:11ಬಿ).

5. *ಆತನಿಗೆ ಭಾವನೆಗಳಿವೆ* (ಪ್ರೀತಿ, ದುಃಖ, ಆನಂದ): "ಸಹೋದರರೇ, ನೀವು ನನಗೋಸ್ಕರ ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲೀಯವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವಾಗಿಯೂ ಪರಿಶುದ್ಧಾತ್ಮನಿಂದಾಗುವ ಪ್ರೀತಿಯ ನಿಮಿತ್ತವಾಗಿಯೂ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (ರೋಮಾಪುರ 15:30); "ದೇವರ ಪರಿಶುದ್ಧಾತ್ಮ ನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30); "ನೀವು ಬಹು ಹಿಂಸೆಯಿಂದಲೂ ಪರಿಶುದ್ಧಾತ್ಮ ನಿಂದ ಉಂಟಾಗುವ ಆನಂದದೊಡನೆ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ ಕರ್ತನನ್ನೂ ಅನುಸರಿಸುವವರಾಗಿದ್ದೀರಿ" (1 ಥೆಸಲೊನೀಕ 1:6).

ಪರಿಶುದ್ಧಾತ್ಮನು ಈ ಗುಣಲಕ್ಷಣಗಳನ್ನು ಹೊಂದಿರುವ ಸಂಗತಿಯು ಆತನು ಒಬ್ಬ ವ್ಯಕ್ತಿಯಾಗಿದ್ದಾನೆಂದು ಪ್ರಕಟಿಸುತ್ತದೆ.

## ಆತನು ಒಬ್ಬ ವ್ಯಕ್ತಿಯ ಚಟುವಟಿಕೆಗಳನ್ನು ಮಾಡುವನು

ಪರಿಶುದ್ಧಾತ್ಮನು ಕೇವಲ ಶಕ್ತಿಯಂತೆ ಅಲ್ಲ ಆದರೆ ಒಬ್ಬ ವ್ಯಕ್ತಿಯಂತೆ ಕಾರ್ಯ ಮಾಡುತ್ತಾನೆ. ಆತನು ಈ ಕೆಳಗಿನವುಗಳನ್ನು ಮಾಡಬಲ್ಲನು:

1. *ಆತನು ಬೋಧಿಸಬಲ್ಲನು ಮತ್ತು ಜ್ಞಾಪಿಸಬಲ್ಲನು*: "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪರಿಶುದ್ಧಾತ್ಮನು ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದೆನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26).

2. *ಆತನು ಸಾಕ್ಷಿ ಹೇಳುವನು*: "ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳು ವನು" (ಯೋಹಾನ 15:26).

3. *ಆತನು ಸರ್ವ ಸತ್ಯದಲ್ಲಿ ನಡಿಸುವನು*: "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13ಎ).

4. *ಆತನು ಮಾತಾಡುತ್ತಾನೆ*: "ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ವುಗಳನ್ನೇ, ಮಾತನಾಡವನು" (ಯೋಹಾನ 16:13ಬಿ; ಅಪೊಸ್ತಲರ ಕೃತ್ಯಗಳು

8:29; 11:12; 1 ತಿಮೊಥಿ 4:1 ನೋಡಿರಿ).

5. *ಆತನು ಕೇಳುತ್ತಾನೆ*: "ಆತನು ... ಕೇಳಿದ ಮಾತುಗಳನ್ನೇ ಆಡುವನು" (ಯೋಹಾನ 16:13ಸಿ).

6. *ಆತನು ಬಹಿರಂಗಪಡಿಸುತ್ತಾನೆ*: "ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು" (ಯೋಹಾನ 16:13ಡಿ).

7. *ಆತನು ಪ್ರತಿಬಂಧಿಸುತ್ತಾನೆ*: "ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳ ಬಾರದೆಂದು ಪರಿಶುದ್ಧಾತ್ಮನು ತಡೆದದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆ ಯನ್ನು ಹಾದು ಹೋಗಿ ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥ್ಯೂನಕ್ಕೆ ಹೋಗುವ ಪ್ರಯತ್ನ ಮಾಡಿದರು" (ಅಪೊಸ್ತಲರ ಕೃತ್ಯಗಳು 16:6).

8. *ಆತನು ಜೀವ ಕೊಡುತ್ತಾನೆ*: "ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಿರುವುದಾದರೆ, ನಿಮ್ಮ ಮರ್ತ್ಯ ದೇಹಗಳಿಗೂ ಸಹ ನಿಮ್ಮಲ್ಲಿ ವಾಸಿಸುವ ಆತ್ಮನ ಮೂಲಕವೇ ಜೀವವನ್ನು ಕೊಡುವನು" (ರೋಮಾಪುರ 8:11ಬಿ).

9. ಆತನು ಪ್ರಕಟಿಸುತ್ತಾನೆ: "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" (1 ಕೊರಿಂಥ 2:10ಎ; ಎಫೆಸ 3:3-5 ನೋಡಿರಿ).

10. *ಆತನು ಪರಿಶೋಧಿಸುತ್ತಾನೆ*: "ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:10ಬಿ).

11. *ಆತನು ವಾಗ್ದಾನ ಮಾಡುತ್ತಾನೆ*: "ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆ ..." (ಗಲಾತ್ಯ 3:14; ಅಪೊಸ್ತಲರ ಕೃತ್ಯಗಳು 2:33 ನೋಡಿರಿ).

12. *ಆತನು ಅನ್ಯೋನ್ಯತೆಯಲ್ಲಿರುತ್ತಾನೆ*: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪರಿಶುದ್ಧಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ" (2 ಕೊರಿಂಥ 13:14; ಫಿಲಿಪ್ಪಿ 2:1 ನೋಡಿರಿ).

13. *ಆತನು ನಮಗೋಸ್ಕರ ಬೇಡಿಕೊಳ್ಳುತ್ತಾನೆ*: "... ಪರಿಶುದ್ಧಾತ್ಮನು ತಾನೇ ಮಾತುಗಳಿಂದ ವ್ಯಕ್ತಪಡಿಸಲು ಸಾಧ್ಯವಾಗದ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ ... ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿ ಕೊಳ್ಳುವನೆಂದು ಆತನು ಬಲ್ಲನು" (ರೋಮಾಪುರ 8:26, 27).

14. *ಆತನು ಸೂಚಿಸುತ್ತಾನೆ ಹಾಗೂ ಮುಂತಿಳಿಸುತ್ತಾನೆ*: "ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ, ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ, ಆತನು ಯಾವ ಕಾಲವನ್ನು ಇಲ್ಲವೇ ಎಂಥಾ ಕಾಲವನ್ನು ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು" (1 ಪೇತ್ರ 1:11).

15. *ಆತನು ಆಹ್ವಾನಿಸುತ್ತಾನೆ*: "ಆತ್ಮನೂ ವಧುವೂ 'ಬಾ' ಅನ್ನುತ್ತಾರೆ" (ಪ್ರಕಟನೆ 22:17ಎ).

16. *ಆತನು ನಡಿಸುತ್ತಾನೆ*: "ಯೇಸು ಪರಿಶುದ್ಧಾತ್ಮ ಭರಿತನಾಗಿ ಯೋರ್ದನ್ ಹೊಳೆಯಿಂದ ಹಿಂತಿರುಗಿ, ದೇವರಾತ್ಮನಿಂದ ನಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಟ್ಟನು" (ಲೂಕ 4:1); "ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾಪುರ 8:14).

ಈ ಪ್ರತಿಯೊಂದು ಕಾರ್ಯದಲ್ಲಿ ಒಬ್ಬ ವ್ಯಕ್ತಿಯು ಭಾಗವಹಿಸುವನು ಆದರೆ ಕೇವಲ ಶಕ್ತಿಯು ಇದನ್ನು ಮಾಡಲಾರದು. ಹೀಗೆ ಪರಿಶುದ್ಧಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆಂದು ನೋಡಲ್ಪಡಬೇಕು.

### ಆತನನ್ನು ಹೀನೈಸಬಹುದು

ಪರಿಶುದ್ಧಾತ್ಮನನ್ನು ಗಾಯಗೊಳಿಸಿದ್ದನ್ನೂ ತಾತ್ಸರ ಮಾಡಿದ್ದನ್ನೂ ವಿವರಿಸಲು ಉಪಯೋಗಿಸಿದ ಪದಗಳು ಸಾಮಾನ್ಯವಾಗಿ ವ್ಯಕ್ತಿಯನ್ನು ತಾತ್ಸಾರ ಮಾಡಲು ಉಪಯೋಗಿಸಿದ ಮಾತುಗಳಂಥಿದ್ದವು. ಈ ರೀತಿಯಲ್ಲಿ ಆತನನ್ನು ಹೀನೈಸಬಹುದು.

1. *ಆತನಿಗೆ ದೂಷಣೆ ಮಾಡಬಹುದು*: "... ಆದರೆ ಪರಿಶುದ್ಧಾತ್ಮ ದೂಷಣೆಗೆ ಕ್ಷಮಾಪಣೆಯಿಲ್ಲ. ... ಪರಿಶುದ್ಧಾತ್ಮನಿಗೆ ವಿರೋಧವಾಗಿ ಮಾತನಾಡಿದರೆ ಅವನಿಗೆ ಇಹದಲ್ಲಾಗಲೀ ಪರದಲ್ಲಾಗಲಿ ಕ್ಷಮಿಸಲ್ಪಡುವದಿಲ್ಲ" (ಮತ್ತಾಯ 12:31, 32).

2. *ಆತನಿಗೆ ಸುಳ್ಳು ಹೇಳಬಹುದು*: "ಆಗ ಪೇತ್ರನು-ಅನನೀಯಾ, ಸೈತಾನನು ನಿನ್ನ ಹೃದಯದಲ್ಲಿ ತುಂಬಿಕೊಂಡದ್ದು ಏಕೆ? ನೀನು ಯಾಕೆ ... ಪರಿಶುದ್ಧಾತ್ಮನನ್ನು ವಂಚಿಸ ಬೇಕೆಂದಿದ್ದೀ?" ಅಂದನು (ಅಪೊಸ್ತಲರ ಕೃತ್ಯಗಳು 5:3ಎ).

3. *ಆತನನ್ನು ಎದುರಿಸಬಹುದು*: "ಚಂಡಿಗಳೇ, ಸುನ್ನತಿಯಿಲ್ಲದ ಕ್ರೂರ ಹೃದಯದರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವು ಯಾವಾಗಲೂ ಪರಿಶುದ್ಧಾತ್ಮನನ್ನು ಎದುರಿಸುವವರಾಗಿದ್ದೀರಿ" (ಅಪೊಸ್ತಲರ ಕೃತ್ಯಗಳು 7:51ಎ).

4. *ಆತನನ್ನು ದುಃಖಪಡಿಸಬಹುದು*: "ದೇವರ ಪರಿಶುದ್ಧಾತ್ಮನನ್ನು

ದುಃಖಪಡಿಸ ಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30).

5. *ಆತನನ್ನು ಅವಮಾನಪಡಿಸಬಹುದು ಇಲ್ಲವೇ ತಿರಸ್ಕರಿಸಬಹುದು*: "ಕೃಪಾ ವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ..." (ಇಬ್ರಿಯ 10:29).

6. *ಆತನನ್ನು ನಂದಿಸಬಹುದು*: ''ಪರಿಶುದ್ಧಾತ್ಮನನ್ನು ನಂದಿಸ ಬೇಡಿರಿ'' (1 ಥೆಸಲೊನೀಕ 5:19).

ಪರಿಶುದ್ಧಾತ್ಮನನ್ನು ಹೇಗೆ ಹೀನೈಸ ಬಹುದೆಂಬುದನ್ನು ಕುರಿತಾಗಿರುವ ಹೇಳಿಕೆಗಳು ಆತನು ಒಬ್ಬ ವ್ಯಕ್ತಿಯಾಗಿರುವನೆಂಬುದನ್ನು ಸೂಚಿಸುತ್ತವೆ. ಬಲವನ್ನು ಇಲ್ಲವೇ ಶಕ್ತಿಯನ್ನು ಹೀನೈಸುವುದಕ್ಕೆ ಮೇಲಿನ ರೀತಿಯ ಸಾಮಾನ್ಯ ಪದಗಳಲ್ಲಿ ವಿವರಿಸಲ್ಪಡುವುದಿಲ್ಲ, ಸಾಂಕೇತಿಕ ಹಿನ್ನೆಲೆಯಲ್ಲಿ ಅಥವಾ ಪದ್ಯಗಳಲ್ಲಿ ಮಾತ್ರ ಉಪಯೋಗಿಸಬಹುದು.

**ಆತನಿಗೆ ಪ್ರತ್ಯೇಕವಾದ ಅಸ್ತಿತ್ವವಿದೆ**

ಪರಿಶುದ್ಧಾತ್ಮನು ವ್ಯಕ್ತಿಯಾಗಿದ್ದಾನೆಂಬುದಕ್ಕೆ ಇನ್ನೊಂದು ಸೂಚನೆಯನ್ನು ತಂದೆಯೊಂದಿಗೂ, ಕುಮಾರನೊಂದಿಗೂ, ಅವರ ಸ್ವಭಾವ ಹಾಗೂ ಗುಣದೊಂದಿಗೆ ನಮೂದಿಸಿದ್ದು ಮಾತ್ರವಲ್ಲದೇ ಆತನಿಗೆ ಆತನ ಸ್ವಂತ ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ಅಸ್ತಿತ್ವವಿರುವುದು.

ಯೇಸುವು ಬಾಪ್ತಿಸ್ಮ ಹೊಂದಿದಾಗ, ಆತನ ಮೇಲೆ ಇಳಿದು ಬಂದನೆಂದು ಆತನ ಬಗ್ಗೆ ಹೇಳಲ್ಪಟ್ಟಿದೆ (ಯೋಹಾನ 1:33). ಕುಮಾರನು ಬಾಪ್ತಿಸ್ಮದ ನೀರಿನಿಂದ ಮೇಲಕ್ಕೆ ಬಂದಾಗ, ಪರಿಶುದ್ಧಾತ್ಮನು ಆತನ ಮೇಲೆ ಇಳಿದು ಬಂದನು ಹಾಗೂ ತಂದೆಯು ಪರಲೋಕದಿಂದ ಮಾತಾಡಿದನು (ಮತ್ತಾಯ 3:16, 17; ಲೂಕ 3:21, 22). ತಂದೆಯು ಪರಲೋಕದಲ್ಲಿ ಉಳಿದುಕೊಂಡನು, ಕುಮಾರನು ಭೂಲೋಕಕ್ಕಿಳಿದನು ಮತ್ತು ಪರಿಶುದ್ಧಾತ್ಮನು ಯೇಸುವಿನೊಂದಿಗೆ ವಾಸಿಸಲು ಬಂದನು.

ಒಬ್ಬ ವ್ಯಕ್ತಿಯು ಯೇಸುವಿಗೆ ವಿರುದ್ಧವಾಗಿ ಕೆಟ್ಟದ್ದನ್ನು ಮಾತಾಡಬಹುದು ಹಾಗೂ ಕ್ಷಮಿಸಲ್ಪಡಬಹುದು. ಆದರೆ ಅವನು ಪರಿಶುದ್ಧಾತ್ಮನಿಗೆ ವಿರುದ್ಧವಾಗಿ ಮಾತಾಡಿದರೆ ಅವನು ಕ್ಷಮಿಸಲ್ಪಡಲಾರನು (ಮತ್ತಾಯ 12:32). ಯೇಸುವೂ ಪರಿಶುದ್ಧಾತ್ಮನೂ ಒಂದೇ ವ್ಯಕ್ತಿಯಾಗಿದ್ದರೆ ಒಬ್ಬನು ಹೇಗೆ ಯೇಸುವಿಗೆ ವಿರುದ್ಧವಾಗಿ ಮಾತಾಡಬಹುದು ಮತ್ತು ಪರಿಶುದ್ಧಾತ್ಮನಿಗೆ ವಿರುದ್ಧವಾಗಿ ಮಾತಾಡಬಾರದು? ಈ ಬೋಧನೆಯನ್ನು ಕೊಡುವಲ್ಲಿ, ಯೇಸುವು ಪ್ರತ್ಯೇಕತೆಯನ್ನು ಅರ್ಥಮಾಡಿಕೊಂಡಿರಬಹುದು.

ಇತರರು ಪರಿಶುದ್ಧಾತ್ಮ ಭರಿತರಾಗಿದ್ದಂತೆ (ಅಪೊಸ್ತಲರ ಕೃತ್ಯಗಳು 6:3, 5; 7:55; 11:24) ಯೇಸುವು ಪವಿತ್ರಾತ್ಮ ಭರಿತನಾಗಿದ್ದಾನೆಂದು ಲೂಕ 4:1 ಹೇಳುತ್ತದೆ. ಅಪೊಸ್ತಲರ ಕೃತ್ಯಗಳಲ್ಲಿಯ ಘಟನೆಗಳಲ್ಲಿ ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟ ಜನರು ಪರಿಶುದ್ಧಾತ್ಮನಂತೆ ಅದೇ ವ್ಯಕ್ತಿಯಾಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಯೇಸು ಮತ್ತು ಪವಿತ್ರಾತ್ಮನು ಸ್ಪಷ್ಟವಾಗಿ ಭಿನ್ನವಾದ ಜೀವಿಗಳಾಗಿದ್ದಾರೆಂಬುದನ್ನು ಗುರುತಿಸಬೇಕು.

ಪರಿಶುದ್ಧಾತ್ಮನು ಇನ್ನೂ ಕೊಡಲ್ಪಟ್ಟಿರುವದಿಲ್ಲ (ಯೋಹಾನ 7:39), ಯಾಕೆಂದರೆ ಯೇಸು ಇನ್ನೂ ಮಹಿಮೆಹೊಂದಿಲ್ಲ ಎಂದು ಯೋಹಾನನು ಬರೆದನು. ಯೇಸುವು ಭೂಲೋಕದಲ್ಲಿ ತನ್ನ ಶಿಷ್ಯರೊಂದಿಗೆ ಆಗಲೇ ಇದ್ದಾಗ ಇದು ಹೇಳಲ್ಪಟ್ಟಿತು. ಪರಿಶುದ್ಧಾತ್ಮನು ಇನ್ನೂ ಕೊಡಲ್ಪಡದೆ ಇದ್ದುದರಿಂದ ಪರಿಶುದ್ಧಾತ್ಮನು ಯೇಸುವಿಗಿಂತ ಬೇರೊಬ್ಬನಾಗಿರಬೇಕು.

ಯೋಹಾನ 14:26ರಲ್ಲಿ "ಬೇರೊಬ್ಬ ಸಹಾಯಕನನ್ನು" "ಕಳುಹಿಸುವೆನೆಂದು ಯೇಸು ಅಪೊಸ್ತಲರಿಗೆ ಹೇಳಿದನು (ಯೋಹಾನ 14:16ರ ಪ್ರಕಾರ ಈತನು ಪರಿಶುದ್ಧಾತ್ಮನಾಗಿದ್ದನು). ಆತನು ತಾನೇ ಸಹಾಯಕನಾಗಿದ್ದರೆ, "ಇನ್ನೊಬ್ಬ" ಸಹಾಯಕನನ್ನು ಆತನು ಹೇಗೆ ಕಳುಹಿಸಿ ಕೊಡುವನು? ಪರಿಶುದ್ಧಾತ್ಮನು, ಯೇಸುವು ಒಬ್ಬನೇ ಆಗಿದ್ದರೆ ಪರಿಶುದ್ಧಾತ್ಮನು "ಇನ್ನೊಬ್ಬ" ಸಹಾಯಕನಾಗುವುದು ಹೇಗೆ?

ತಾನು ಹೋಗದಿದ್ದರೆ ಪರಿಶುದ್ಧಾತ್ಮವು ಬರುವದಿಲ್ಲವೆಂದು ಯೇಸು ಹೇಳಿದನು (ಯೋಹಾನ 16:7). ಪರಿಶುದ್ಧಾತ್ಮನು ತನ್ನಷ್ಟಕ್ಕೆ ತಾನೇ ಮಾತಾಡುವದಿಲ್ಲ ಆದರೆ ಯೇಸುವಿನಿಂದ ಕೇಳಿದ್ದನ್ನು ಮಾತಾಡುತ್ತಾನೆ ಎಂದು ಆತನು ಹೇಳಿದನು (ಯೋಹಾನ 16:13). ಯೇಸುವಿನ ಬಗ್ಗೆ ಮತ್ತು ಪರಿಶುದ್ಧಾತ್ಮನ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಮಾಹಿತಿಯೂ ಅವರು ಇಬ್ಬರು ಸ್ವತಂತ್ರವಾದ, ಭಿನ್ನವಾದ ಪರಲೋಕದ ವ್ಯಕ್ತಿಗಳು ಎಂಬುದನ್ನು ಸೂಚಿಸುತ್ತದೆ.

## ಆತನು ದೈವವಾಗಿದ್ದಾನೆ

ಪರಿಶುದ್ಧಾತ್ಮನು ತಂದೆಯೊಂದಿಗೆ, ಹಾಗೂ ಕುಮಾರನೊಂದಿಗೆ ಅವರಿಗೆ ಸರಿಸಮಾನನಾಗಿ, ಅದೇ ಅಂತಸ್ತು ಉಳ್ಳವನಾಗಿ ಹೇಳಲ್ಪಟ್ಟಿದ್ದಾನೆ. ಜನರು ತಂದೆ, ಕುಮಾರ ಹಾಗೂ ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಲ್ಪಡಬೇಕು (ಮತ್ತಾಯ 28:19). 2 ಕೊರಿಂಥ 13:14ರಲ್ಲಿ ಒಂದೇ ಅಂತಸ್ತು ಉಳ್ಳವರಂತೆ ಪೌಲನು ಈ ಮೂವರನ್ನು ಒಂದಾಗಿ ನಮೂದಿಸಿದ್ದಾನೆ; "ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪರಿಶುದ್ಧಾತ್ಮನ

ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ.” ಆತ್ಮನು, ದೇವರು (“ತಂದೆಯು”; 1 ಕೊರಿಂಥ 8:6) ಮತ್ತು ಕರ್ತನು (“ಯೇಸುವು”; 1 ಕೊರಿಂಥ 8:6) ಆತ್ಮಿಕ ವರಗಳನ್ನು ಕೊಡುವವರಾಗಿದ್ದಾರೆ (1 ಕೊರಿಂಥ 12:4-6). ಇವು ಪವಿತ್ರಾತ್ಮನ ಚಿತ್ತಕ್ಕನುಸಾರವಾಗಿ ಕೊಡಲ್ಪಡುತ್ತವೆಂದು ಹೇಳಲ್ಪಟ್ಟಿವೆ (1 ಕೊರಿಂಥ 12:11).[1]

ತಂದೆ, ಕುಮಾರ, ಪವಿತ್ರಾತ್ಮ ಭಿನ್ನವಾದವರೂ, ಒಂದೇ ಸ್ವಭಾವದ ಪರಲೋಕ ಜೀವಿಗಳೂ ಆಗಿರುವರೆಂಬುದನ್ನು ಹೊಸ ಒಡಂಬಡಿಕೆಯಲ್ಲಿ ಪುರಾವೆಯು ಸ್ಪಷ್ಟವಾಗಿಯೂ ಬಲವಾಗಿಯೂ ತೋರಿಸುತ್ತದೆ. ಅವರು ತಮ್ಮ ಸಂಬಂಧಗಳಲ್ಲಿ ಹಾಗೂ ಮಾನವ ಜನಾಂಗಕ್ಕೆ ತಮ್ಮ ಸೇವೆಯಲ್ಲಿ ಒಂದಾಗಿ ಕೂಡಿಸಲ್ಪಟ್ಟಿದ್ದಾರೆ.

ದೇವರಿಂದ ಮಾತ್ರವೇ ಹೊಂದಿಕೊಂಡಿರುವ ಗುಣಲಕ್ಷಣಗಳು ಪವಿತ್ರಾತ್ಮನಿಗೂ ಅನ್ವಯಿಸಲ್ಪಟ್ಟಿವೆ. ಆತನು ತಂದೆಯೊಂದಿಗೂ, ಕುಮಾರನೊಂದಿಗೂ ಹಂಚಿಕೊಳ್ಳುವ ಐದು ಲಕ್ಷಣಗಳನ್ನು ಗಮನಿಸೋಣ:

1. *ಆತನು ನಿತ್ಯನು*: ನಿತ್ಯವಾದ ಗುಣಸ್ವಭಾವಕ್ಕೆ ಸಂಬಂಧಿಸಿದ ಬೈಬಲಿನ ಹೇಳಿಕೆಗಳು: (1) ಪವಿತ್ರಾತ್ಮನಿಗೆ ಸಂಬಂಧಿಸಿ - “... ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕ್ರಿಯೆಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ” (ಇಬ್ರಿಯ 9:14); (2) ತಂದೆಯೊಂದಿಗೆ ಸಂಬಂಧಿಸಿ - “ಪೂರ್ವದಿಂದಲೂ ನಿನ್ನ ಸಿಂಹಾಸನವು ಸ್ಥಿರವಾಗಿದೆ: ಅನಾದಿಯಿಂದ ನೀನು ಇದ್ದೀ” (ಕೀರ್ತನೆ 93:2); ಹಾಗೂ (3) ಯೇಸುವಿಗೆ ಸಂಬಂಧಿಸಿ “ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು” (ಇಬ್ರಿಯ 13:8); “ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು” (2 ಪೇತ್ರ 1:11).

2. *ಆತನು ಸರ್ವ ಜ್ಞಾನಿಯಾಗಿದ್ದಾನೆ*: ಈ ಜ್ಞಾನವು ಬೈಬಲಿನ ವಾಕ್ಯದಲ್ಲಿ ಹೇಳಲ್ಪಟ್ಟಿದೆ: (1) ಪವಿತ್ರಾತ್ಮನನ್ನು ಕುರಿತು “ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ” (1 ಕೊರಿಂಥ 2:10); (2) ತಂದೆಯನ್ನು ಕುರಿತು - “ನಾವು ಯಾವಾತನಿಗೆ ಲೆಕ್ಕ ಒಪ್ಪಿಸ ಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಆಗಿದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ” (ಇಬ್ರಿಯ 4:13);

(3) ಯೇಸುವನ್ನು ಕುರಿತು - "ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯವಿರಲಿಲ್ಲ" (ಯೋಹಾನ 2:24, 25).

3. *ಆತನು ಸರ್ವಶಕ್ತನು*: ಪ್ರತಿಯೊಂದರ ಮೇಲೆ ಈ ಶಕ್ತಿಯು ಇರುವದನ್ನು ಬೈಬಲಿನ ಅನೇಕ ವಾಕ್ಯಗಳು ನಮೂದಿಸುತ್ತವೆ: (1) ಪರಿಶುದ್ಧಾತ್ಮನಿಗೆ ಸಂಬಂಧಿಸಿ: "ನಿನ್ನ ಮೇಲೆ ಪರಿಶುದ್ಧಾತ್ಮನು ಬರುವುದು; ಮಹೋನ್ನತನ ಶಕ್ತಿಯು ನಿನ್ನನು ಆವರಿಸುವುದು" (ಲೂಕ 1:35ಬಿ). "ತರುವಾಯ ಯೇಸು ಪರಿಶುದ್ಧಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು" (ಲೂಕ 4:14ಎ), "ಆದರೆ ಪರಿಶುದ್ಧಾತ್ಮ ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 1:8ಎ); (2) ದೇವರಿಗೆ ಸಂಬಂಧಿಸಿ - "ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ" (ಲೂಕ 1:37); ಹಾಗೂ (3) ಯೇಸುವಿಗೆ ಸಂಬಂಧಿಸಿ - "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ ..." (ಮತ್ತಾಯ 28:18).

4. *ಆತನು ಸರ್ವ ವ್ಯಾಪಿಯಾಗಿದ್ದಾನೆ*: ಎಲ್ಲಾ ಕಡೆಯಲ್ಲಿಯೂ ಇರುವದಕ್ಕೆ ಶಕ್ತಿಯಿದೆ. (1) ಪರಿಶುದ್ಧಾತ್ಮನಿಗೆ - "ನಾನು ನಿನ್ನ ಆತ್ಮದಿಂದ ತಪ್ಪಿಸಿಕೊಂಡು ಎಲ್ಲಿಗೆ ಹೋಗಲಿ?" (ಕೀರ್ತನೆ 139:7ಎ); (2) ತಂದೆಗೆ - ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? "ಆಕಾಶವೂ ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವು" (1 ಅರಸುಗಳು 8:27ಎ); "ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತ ಸ್ಥಳಗಳಲ್ಲಿ ತನ್ನನ್ನು ಮರೆ ಮಾಡಿಕೊಂಡಾನೇ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೋ?" (ಯೆರೆಮೀಯ 23:24); ಹಾಗೂ (3) ಯೇಸುವಿಗೆ - "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20ಬಿ).

5. *ಆತನಿಗೆ ಸೃಷ್ಟಿಸುವ ಶಕ್ತಿಯಿದೆ*: ಬೈಬಲಿನ ಈ ವಾಕ್ಯಗಳು ದೈವತ್ವದ ಪ್ರತಿಯೊಬ್ಬ ಸದಸ್ಯನನ್ನು ಸೃಷ್ಟಿಕರ್ತನಂತೆ ಚಿತ್ರಿಸುತ್ತದೆ: (1) ಪರಿಶುದ್ಧಾತ್ಮನು - "... ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು" (ಆದಿಕಾಂಡ 1:2); (2) ತಂದೆ - "ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಆಕಾಶಮಂಡಲವನ್ನು ಹರಡಿದ್ದಾನೆ" (ಯೆರೆಮೀಯ 51:15); ಹಾಗೂ (3) ಕುಮಾರನು - "ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರ ವಾಗಿಯೂ ಸೃಷ್ಟಿಸಲ್ಪಟ್ಟಿತು" (ಕೊಲೊಸ್ಸೆ 1:16).

## ಮುಕ್ತಾಯ

ದೇವರಿಗೆ ಮಾತ್ರವೇ ಅನ್ವಯಿಸುವ ಮಾತುಗಳಲ್ಲಿ ಪರಿಶುದ್ಧಾತ್ಮನು ವಿವರಿಸಲ್ಪಟ್ಟಿದ್ದಾನೆ. ಈ ಮಾತುಗಳಿಂದ ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ದೈವತ್ವವನ್ನು ಉಳ್ಳವರಾಗಿ ತಂದೆಯೊಂದಿಗೂ ಕುಮಾರನೊಂದಿಗೂ ಒಂದಾಗಿರುವನು. ಆದರೆ ಭಿನ್ನವಾದ ವ್ಯಕ್ತಿತ್ವವುಳ್ಳವನಾಗಿರುವನೆಂದೂ ನಾವು ತೀರ್ಮಾನಿಸಬಹುದು. ಆತನು ಬೈಬಲಿನ ಮಹತ್ವದ ಹಾಗೂ ಕೇಂದ್ರ ವ್ಯಕ್ತಿಯಾಗಿದ್ದಾನೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ಪರಿಶುದ್ಧಾತ್ಮನು ಏನಾಗಿದೆ?" ಎಂಬುದಕ್ಕಿಂತ "ಪರಿಶುದ್ಧಾತ್ಮನು ಯಾರು?" ಎಂಬುದು ಯಾಕೆ ಪ್ರಶ್ನೆಯಾಗಿರಬೇಕೆಂಬುದನ್ನು ವಿವರಿಸಿರಿ.
2. ಪರಿಶುದ್ಧಾತ್ಮನು ಜೀವಿಸುವ "ವ್ಯಕ್ತಿ" ಯಾಗಿದ್ದಾನೆಂದು ಸೂಚಿಸುವ ಐದು ಲಕ್ಷಣಗಳು ಯಾವವು?
3. ಪರಿಶುದ್ಧಾತ್ಮನನ್ನು ತಪ್ಪಾಗಿ ನಡಿಸಿಕೊಳ್ಳ ಬಹುದೆಂಬ ನಂಬಿಕೆಯು ಆತನು ವ್ಯಕ್ತಿಯಾಗಿದ್ದಾನೆಂದು ಹೇಗೆ ಸೂಚಿಸುತ್ತದೆ?
4. ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ಹಂಚಿಕೊಳ್ಳುವ ಗುಣಲಕ್ಷಣಗಳು ಯಾವವು?

## ಪದ ಸಹಾಯಗಳು

ಗುಣಲಕ್ಷಣಗಳು - ಲಕ್ಷಣಗಳು ಇಲ್ಲವೇ ವಿಶೇಷ ಗುಣಲಕ್ಷಣಗಳು "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಟಿಸಿದವುಗಳ ಮೂಲಕ ಸ್ಪಷ್ಟವಾಗಿ ಕಂಡು ಬರುತ್ತವೆ - ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ" ಎಂದು ರೋಮಾಪುರ 1:20 ಹೇಳುತ್ತದೆ.

ಅದ್ಭುತಕರವಾದ ವರಗಳು - ದೇವರಿಂದ ಕೊಡಲ್ಪಡುವ ವಿಶೇಷ ಸಾಮರ್ಥ್ಯಗಳು - ಬಾಷೆಗಳನ್ನಾಡುವುದು, ಗುಣಪಡಿಸುವುದು, ಹಾಗೂ ಪ್ರವಾದಿಸುವ ವರಗಳು - ಹೊಸ ಒಡಂಬಡಿಕೆಯ ಬರಹವು ಪೂರ್ತಿಗೊಳ್ಳುವ ಮೊದಲು ಆದಿ ಸಭೆಗೆ ಕೊಡಲ್ಪಟ್ಟವು. ಇನ್ನು ಮುಂದೆ ಈ ವರಗಳ ಅಗತ್ಯತೆಯಿಲ್ಲ. ಹಾಗೂ ಅವು ಲಭ್ಯವಿರುವದಿಲ್ಲ (ಎಫೆಸ 4:5; ಮತ್ತಾಯ 28:18-20 ನೋಡಿರಿ).

## ಕ್ರೈಸ್ತರಲ್ಲಿ ಇಂದು ಪರಿಶುದ್ಧಾತ್ಮನ ಕಾರ್ಯ

1. ಪಾಪದ ಮತ್ತು ಮರಣದ ನಿಯಮದಿಂದ ನಮ್ಮನ್ನು ಬಿಡುಗಡೆ ಮಾಡುತ್ತಾನೆ (ರೋಮಾಪುರ 8:2-8).
2. ಆತನು ನಮ್ಮ ಪುನರುತ್ಥಾನವನ್ನು ತರುವನು (ರೋಮಾಪುರ 8:11).
3. ನಮ್ಮ ಪ್ರಾರ್ಥನೆಗಳಿಗೆ ಆತನು ಸಹಾಯ ಮಾಡುವನು (ರೋಮಾಪುರ 8:26; ಎಫೆಸ 6:18).
4. ನಮ್ಮ ಪರವಾಗಿ ಆತನು ಬೇಡಿಕೊಳ್ಳುತ್ತಾನೆ (ರೋಮಾಪುರ 8:26, 27).
5. ಆತನು ನಮ್ಮನ್ನು ನಡಿಸುವನು (ರೋಮಾಪುರ 8:14).
6. ವಿಮೋಚನೆಯ ದಿನದ ಒಪ್ಪಂದಕ್ಕಾಗಿ ಮುದ್ರೆ ಹಾಕುವನು (2 ಕೊರಿಂಥ 1:22; ಎಫೆಸ 1:13, 14; 4:30).
7. ಆತನಿಗೆ ನಮ್ಮೊಂದಿಗೆ ಅನ್ಯೋನ್ಯತೆಯಿರುವುದು (2 ಕೊರಿಂಥ 13:14).
8. ತಂದೆಯ ಬಳಿಗೆ ಆತನು ಮಾರ್ಗ ಮಾಡುವನು (ಎಫೆಸ 2:18).
9. ಆಂತರ್ಯದ ವ್ಯಕ್ತಿಯನ್ನು ಆತನು ಬಲಪಡಿಸುವನು (ಎಫೆಸ 3:16).
10. ಆತನು ಐಕ್ಯತೆಯನ್ನು ತರುವನು (ಎಫೆಸ 4:3).
11. ಆತನು ನಮ್ಮನ್ನು ಶುದ್ಧೀಕರಿಸುವನು (2 ಥೆಸಲೊನೀಕ 2:13).

ಟಿಪ್ಪಣಿ

[1]ಅದ್ಭುತಕರವಾದ ವರಗಳು ನಿಂತುಹೋಗಿವೆ. 1 ಕೆರಿಂಥ 13:8-13ರ ಸ್ಪಷ್ಟವಾದ ಹೇಳಿಕೆಯ ನಿಮಿತ್ತ ಇದರ ಬಗ್ಗೆ ನಮಗೆ ಭರವಸೆಯಿದೆ. 1 ಕೊರಿಂಥದ ಮೂರು ಅಧ್ಯಾಯಗಳಲ್ಲಿ ಅದ್ಭುತಕರವಾದ ವರಗಳ ಬಗ್ಗೆ ಪೌಲನ ಚರ್ಚೆಯನ್ನು ಕಂಡುಕೊಳ್ಳು ತ್ತೇವೆ (12-14). ಈ ಚರ್ಚೆಯ ಮಧ್ಯದಲ್ಲಿ ಯಾವುದೇ ಅದ್ಭುತವಾದ ವರಕ್ಕಿಂತ ಪ್ರೀತಿಯು ಹೆಚ್ಚು ಮಹತ್ವದ್ದಾಗಿದೆಯೆಂದು ಹೇಳಿದ್ದಾನೆ (13:1-3). ಆಗ ಅವನು ಪ್ರೀತಿ ಯನ್ನು ವಿವರಿಸಿದ್ದಾನೆ (13:4-7). ಅಧ್ಯಾಯದ ಅಂತ್ಯಭಾಗದಲ್ಲಿ (13:8-13) ಪ್ರೀತಿಯು ಹೆಚ್ಚು ದೊಡ್ಡದಾದ ವರವಾಗಿ, ಆತ್ಮಿಕ ವರಗಳಿಗಿಂತ ಹೆಚ್ಚು ದೊಡ್ಡದಾಗಿರುವುದೆಂದು ಹೇಳಿದ್ದಾನೆ. "ಪ್ರವಾದನೆಗಳಾದರೂ ಇಲ್ಲವಾಗುವವು; ವಾಣಿಗಳೇ ನಿಂತು ಹೋಗುವವು: ವಿದ್ಯೆಯೋ ಇಲ್ಲದಂತಾಗುವುದು" ಎಂದು ಪೌಲನು ಹೇಳಿದನು. ಈ ವರಗಳು, "ಅಪೂರ್ಣವಾಗಿ ತಿಳಿದು ಕೊಳ್ಳುತ್ತೇವೆ; ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು" (9, 10 ವಚನಗಳು) ಎಂದು ಪೌಲನು ತಿಳಿಯಲು ಕಾರಣವಾದವು. "ಸಂಪೂರ್ಣವಾದದ್ದು ಬರುವಾಗ" ಈ ಅಪೂರ್ಣವಾದ ವರಗಳು ನಿಂತು ಹೋಗುವವು.

"ಪರಿಪೂರ್ಣವಾದದ್ದು" ಅಂದರೆ "ಸಂಪೂರ್ಣವಾದದ್ದು" ಎಂದರ್ಥವಾಗಿ "ಭಾಗ ವಾಗಿರುವಂಥದ್ದರ" ವಿರುದ್ಧವಾಗಿ ನಿಲ್ಲುತ್ತದೆ. "ಅಪೂರ್ಣವಾದದ್ದು" ದೇವರ ವಾಕ್ಯವು ಬಾಯ್ದೆರೆಯಾಗಿ ಪ್ರಕಟಿಸಿದ ಅದ್ಭುತಕರವಾದ ಜ್ಞಾನ ಮತ್ತು ಪ್ರವಾದನೆ ಆಗಿದೆ.

ಹೀಗಿರುವಾಗ ಪೂರ್ತಿಯಾದದ್ದು ಇಲ್ಲವೇ "ಪರಿಪೂರ್ಣವಾದದ್ದು" ಹೊಸ

ಒಡಂಬಡಿಕೆಯ ಲಿಖಿತ ದಾಖಲೆಯಲ್ಲಿ ಮನುಷ್ಯನಿಗೆ ಕೊಡಲ್ಪಟ್ಟ ಪೂರ್ವ ಪ್ರಕಟಣೆಯಾಗಿದೆ ಎಂದು ಅರ್ಥಮಾಡಿಕೊಳ್ಳುವುದು ಹೆಚ್ಚು ಸ್ವಾಭಾವಿಕವಾದದ್ದಾಗಿದೆ. ದೇವರ ಚಿತ್ತದ ಈ ಸಂಪೂರ್ಣ ಪ್ರಕಟನೆಯು, "ದೇವ ಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯು" (ಯೂದ 3) ಮೊದಲನೆಯ ಶತಮಾನದ ಅಂತ್ಯದ ಸುಮಾರಿಗೆ ಸಾಮಾನ್ಯರ ವಶಕ್ಕೆ ಬಂದಿತ್ತು. "ಪರಿಪೂರ್ಣವಾದದ್ದು" ಬಂದಾಗ "ಅಪೂರ್ಣವಾದದ್ದು" ತೆಗೆದು ಹಾಕಲ್ಪಟ್ಟಿತು. ಹೊಸ ಒಡಂಬಡಿಕೆಯು ದೇವರ ಪರಿಪೂರ್ಣ ಚಿತ್ತವನ್ನು ದಾಖಲೆ ಮಾಡುವದರಿಂದ (2 ತಿಮೊಥೆ 3:16, 17; 2 ಪೇತ್ರ 1:3) ಅದ್ಭುತಕರವಾದ ವರಗಳು ಇನ್ನೂ ಹೆಚ್ಚಿನ ಪ್ರಕಟನೆಗಳನ್ನು ಒದಗಿಸಲು ಅವಶ್ಯವಾಗಿರುವದಿಲ್ಲ.